ಓ.ಎಸ್.ನಂ.428-2014
ಡಿ.ಡಬ್ಲು-೧

ದಿ: 08-08-2024 ರಂದು ಪ್ರತಿವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು**: ವಾದಿಗಳ ಪರ ಶ್ರೀಯುತ ಆರ್.ಎಂ. ವಕೀಲರಿಂದ.

ನಾನು ೮ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸರ್ವೆ ನಂ.3/8 ಜಮೀನಿನಲ್ಲಿ ೨ ಎಕರೆ ಜಮೀನು ಮಂಜೂರಾತಿ ಮೂಲಕ ನನ್ನ ತಾತನಿಗೆ ಬಂದಿರುತ್ತದೆ. ಸದರಿ ಜಮೀನು ನಮ್ಮ ಹೆಸರಿಗೆ ಖಾತಾ ವರ್ಗಾವಣೆ ಮೂಲಕ ಬಂದಿರುತ್ತದೆ. ಸದರಿ ದಿನ ನಾನು ಮತ್ತು ನನ್ನ ದೊಡ್ಡಪ್ಪನ ಮಕ್ಕಳು ಹೋಗಿ ಖಾತೆ ಮಾಡಿಸಿರುತ್ತೇವೆ. ಸದರಿ ಖಾತೆಯನ್ನು ನನ್ನ ಒಬ್ಬನ ಹೆಸರಿಗೆ ಮಾಡಲಾಗಿರುತ್ತದೆ. ವಾದಿಯ ಪರಿಚಯ ಇಲ್ಲ. ಈ ಹಿಂದೆ ಯನಗುಂಟೆಯಲ್ಲಿ ವಾಸವಾಗಿದ್ದು ಪ್ರಸ್ತುತ ಸೂಲಿಬೆಲೆಯಲ್ಲಿ ವಾಸವಾಗಿರುತ್ತೇನೆ. ನಾನು ಯನಗುಂಟೆಯಲ್ಲಿ ಹುಟ್ಟಿದಾಗಿನಿಂದ ವಾಸ ಮಾಡಿಕೊಂಡು ಬಂದಿರುತ್ತೇನೆ. ನಾನು ಸೂಲಿಬೆಲೆಗೆ ಬಂದು 22 ವರ್ಷಗಳಾಗಿರುತ್ತದೆ. ಸರ್ವೆ ನಂ.3/8 ರಲ್ಲಿ ನಮಗೆ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ಯಾವ ಸಾಲಿನಲ್ಲಿ ಸರ್ವೆ ನಂ.3/14 ಜಮೀನ್ನನ್ನು ಖರೀದಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ.3/14 ಎಷ್ಟು ವಿಸ್ತೀರ್ಣ ಹೊಂದಿದೆ ಎಂದು ನನಗೆ ಗೊತ್ತಿಲ್ಲ. ದಿ: 5.09.1980 ರಲ್ಲಿ ನನ್ನ ತಾತ ಸರ್ವೆ ನಂ.3/14 ಜಮೀನ್ನನ್ನು ವಾದಿಗೆ ಕ್ರಯಕ್ಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.3/14 ಜಮೀನಿನ ಪಹಣಿ ಪತ್ರಿಕೆಗಳು ವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಯಾವುದೇ ರೀತಿಯ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಮೇಲಿನ ದ್ವೇಷದ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಪರಿಚಯ ಇದೆ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.